**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.**

<u>ಎಸ್.ಸಿ.5033/2024</u>

ದಿಃ10.11.2025
ಚಾಸಾ-4 ಪ್ರಾಸಾ-2

| | |
|---|---|
| ಹೆಸರು | : ನಂಜುಂಡಪ್ಪ |
| ತಂದೆಯ ಹೆಸರು | : ಮುದ್ದೀರಪ್ಪ |
| ವಯಸ್ಸು | : 50 ವರ್ಷ |
| ಉದ್ಯೋಗ | : ಅರಣ್ಯ ರಕ್ಷಕ, ಕನಕಪುರ ವಲಯ |
| ವಾಸ | : ಹಾರೋಹಳ್ಳಿ |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

ಸಾಕ್ಷಿಯು ದಿಃ13.10.2018ರ ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ದಿಃ13.10.2015ರಂದು ಚಾಸಾ-1ರವರು ನನಗೆ ದೂರವಾಣಿ ಮೂಲಕ ಕರೆ ಮಾಡಿ ಅಕ್ರಮವಾಗಿ ಶ್ರೀಗಂಧದ ಮರದ ತುಂಡುಗಳನ್ನು ಸಾಗಣಿಕೆ ಮಾಡುತ್ತಿದ್ದ ಆಸಾಮಿಗಳನ್ನು ಹಿಡಿದಿದ್ದು, ಪಂಚನಾಮೆ ಜರುಗಿಸಲು ಮರಳವಾಡಿ ಬಸ್ ನಿಲ್ದಾಣಕ್ಕೆ ಬರಲು ತಿಳಿಸಿದ್ದು, ಅದರಂತೆ ನಾನು ಮರಳವಾಡಿ ಬಸ್ ನಿಲ್ದಾಣಕ್ಕೆ ಬೆಳಗ್ಗೆ 11-00 ಗಂಟೆಗೆ ಹೋಗಿರುತ್ತೇನೆ. ನಂತರ ಚಾಸಾ-1ರವರು ಚಾಸಾ-3ರವರಿಗೆ ಪಂಚರಿಗೆ ಬರಲು ಫೋನ್ ಮಾಡಿ ತಿಳಿಸಿದಂತೆ, ಚಾಸಾ-3ರವರು ಮರಳವಾಡಿ ಬಸ್ ನಿಲ್ದಾಣಕ್ಕೆ ಬಂದಿರುತ್ತಾರೆ. ನಂತರ ಚಾಸಾ-1ರವರು ಇಬ್ಬರು ಆಸಾಮಿಗಳನ್ನು ನನ್ನ ಹಾಗೂ ಚಾಸಾ-3ರವರ ಸಮಕ್ಷಮ ವಿಚಾರಣೆಗೊಳಪಡಿಸಿದಾಗ ಆ ಇಬ್ಬರು ಆಸಾಮಿಗಳು ಗೊಲ್ಲರದೊಡ್ಡಿ ಗ್ರಾಮದ ಅರಣ್ಯಪ್ರದೇಶದಿಂದ ಶ್ರೀಗಂಧದ ಮರವನ್ನು ಕಡಿದು ತುಂಡುಗಳನ್ನಾಗಿ ಪರಿವರ್ತಿಸಿಕೊಂಡು ಮಾರಾಟ ಮಾಡಲು ರಾಮನಗರಕ್ಕೆ ತೆಗೆದುಕೊಂಡು ಹೋಗುತ್ತಿರುವ ವಿಚಾರವನ್ನು ತಿಳಿಸಿರುತ್ತಾರೆ. ನಂತರ ಚಾಸಾ-1ರವರ ಇಬ್ಬರು ಆಸಾಮಿಗಳನ್ನು ಸುಪರ್ದಿಗೆ ಪಡೆದು ಅವರ ಬಳಿ ಇದ್ದ ಶ್ರೀಗಂಧದ ಮರದ ತುಂಡುಗಳನ್ನು ವಶಕ್ಕೆ ಪಡೆದು ತೂಕ ಮಾಡಿ ಮಹಜರ್ ಕ್ರಮ ಜರುಗಿಸಿರುತ್ತಾರೆ.

ಚಾಸಾ-1ರವರು ನನ್ನ ಹಾಗೂ ಚಾಸಾ-3ರವರ ಸಮಕ್ಷಮ ಮಧ್ಯಾಹ್ನ 1-30 ರಿಂದ 3-00 ಗಂಟೆಯವರೆಗೆ ನಿಪಿ-1ರಂತೆ ಮಹಜರನ್ನು ಜರುಗಿಸಿರುತ್ತಾರೆ. ನಂತರ ಚಾಸಾ-1ರವರು ಇಬ್ಬರು ಆಸಾಮಿಗಳು ಹಾಗೂ ಶ್ರೀಗಂಧದ ಮರದ ತುಂಡುಗಳನ್ನು ಕನಕಪುರ ವಲಯ ಅರಣ್ಯಾಧಿಕಾರಿಗಳ ಕಛೇರಿಗೆ ತಂದು ಹಾಜರುಪಡಿಸಿರುತ್ತಾರೆ. ಚಾಸಾ-1ರವರು ಇಬ್ಬರು ಆಸಾಮಿಗಳನ್ನು ವಿಚಾರಣೆಗೊಳಪಡಿಸಿದಾಗ ಅವರ ಹೆಸರು ಚಿಕ್ಕತಿಮ್ಮ ಮತ್ತು ರಾಮಕೃಷ್ಣ ಎಂದು ತಿಳಿಸಿರುತ್ತಾರೆ. ನಿಪಿ-1ಕ್ಕೆ ನನ್ನ ಜೊತೆ ಚಾಸಾ-3ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ನಾಲ್ಕು ಶ್ರೀಗಂಧದ ತುಂಡುಗಳು, ಏಳು ಚಕ್ಕೆಗಳು ಹಾಗೂ ಒಂದು ಬ್ಯಾಗನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂಒ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ನಾನು ನಮ್ಮ ಇಲಾಖೆಯ ಮೇಲಾಧಿಕಾರಿಗಳ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ ಎಬಿಎಸ್, ಆರೋಪಿತರ ಪರ ವಕೀಲರಿಂದ</u>

ಚಾಸಾ-1ರವರು ನನಗೆ ಪಂಚರಾಗಿ ಬರಲು ಲೇಖಿ ನೋಟೀಸ್ ನೀಡಿರಲಿಲ್ಲ ಎಂದರೆ ಸರಿ. ಚಾಸಾ-1ರವರು ನನಗೆ ಫೋನ್ ಮಾಡಿದ ಸಮಯದಲ್ಲಿ ನಾನು ಹಾರೋಹಳ್ಳಿ ಕರಿಕಲ್ ದೊಡ್ಡಿ ಬಳಿ ಕೆಲಸ ಮಾಡುತ್ತಿದ್ದೆನು. ನಾನು ಕೆಲಸ ಮಾಡುತ್ತಿದ್ದ ಸ್ಥಳದಿಂದ ಮರಳವಾಡಿ ಬಸ್ ನಿಲ್ದಾಣಕ್ಕೆ ಸುಮಾರು ಏಳು ಕಿಲೋ ಮೀಟರ್ ದೂರವಾಗುತ್ತದೆ. ನಾನು ಬೆಳಗ್ಗೆ 10-45 ಗಂಟೆಗೆ ಮರಳವಾಡಿ ಬಸ್ ನಿಲ್ದಾಣದ ಬಳಿ ಹೋಗಿರುತ್ತೇನೆ. ಆ ಸಮಯದಲ್ಲಿ ಸುಮಾರು 30 ರಿಂದ 40 ಜನ ಸಾರ್ವಜನಿಕರು ಹಾಜರಿದ್ದರು. ಮರಳವಾಡಿ ಬಸ್ ನಿಲ್ದಾಣದ ಆವರಣದಲ್ಲಿ ಸಿಸಿ ಕ್ಯಾಮೆರಾವನ್ನು ಅಳವಡಿಸಲಾಗಿರುತ್ತದೆ ಎಂದರೆ ಸರಿ. ನಾನು ಮರಳವಾಡಿ ಬಸ್ ನಿಲ್ದಾಣದ ಬಳಿ ಹೋದ ನಂತರ ಚಾಸಾ-3ರವರು ಬಂದಿರುತ್ತಾರೆ. ಚಾಸಾ-1ರವರು ನನಗೆ ಫೋನ್ ಮಾಡಿದ ಫೋನ್ ನಂಬರನ್ನು ಈಗ ಹೇಳಲು ಆಗುವುದಿಲ್ಲ. ಚಾಸಾ-1ರವರ ಸುಪರ್ದಿಯಲ್ಲಿದ್ದ ಆಸಾಮಿಗಳು ಯಾವ ಯಾವ ಬಣ್ಣದ ಬಟ್ಟೆಗಳನ್ನು ಧರಿಸಿದ್ದರು ಎಂದು ಈಗ ಹೇಳಲು

ಆಗುವುದಿಲ್ಲ. ಚಾಸಾ-1ರವರು ಶ್ರೀಗಂಧದ ಮರವನ್ನು ತೂಕ ಹಾಕುವಾಗ ಅವುಗಳು ಎಷ್ಟು ತುಂಡು ಹಾಗೂ ಚಕ್ಕೆಗಳು ಇದ್ದವು ಎಂದು ನಾನು ಎಣಿಸಿರುವುದಿಲ್ಲ ಹಾಗೂ ನೋಡಿರುವುದಿಲ್ಲ. ಚಾಸಾ-1ರವರು ದೂರವಾಣಿ ಮೂಲಕ ಫೋನ್ ಮಾಡಿ ಮರಳವಾಡಿ ಬಸ್ ನಿಲ್ದಾಣಕ್ಕೆ ಬರಲು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರು ನನ್ನ ಹಾಗೂ ಚಾಸಾ-3ರವರ ಸಮಕ್ಷಮ ಮರಳವಾಡಿ ಬಸ್ ನಿಲ್ದಾಣದಲ್ಲಿ ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ ಹಾಗೂ ಯಾವುದೇ ಶ್ರೀಗಂಧದ ತುಂಡುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-1ಕ್ಕೆ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ತಿಳಿಯದಿದ್ದರೂ ಸಹ ಇಲಾಖೆಯ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.**

ಎಸ್.ಸಿ.5025/2023

ದಿ:07.11.2025
ಚಾಸಾ-5 ಪ್ರಾಸಾ-4

| | | |
|---|---|---|
| ಹೆಸರು | : | |
| ತಂದೆಯ ಹೆಸರು | : | |
| ವಯಸ್ಸು | : | |
| ಉದ್ಯೋಗ | : | |
| ವಾಸ | : | |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ**

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರಿಂದ**

**ಪಾಟೀ ಸವಾಲು: ಶ್ರೀ ಇಎಸ್‌ಜಿ ವಕೀಲರಿಂದ ಆರೋಪಿತರ ಪರವಾಗಿ-ಇರುವುದಿಲ್ಲ.**

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.

**<u>ಪಾಟೀ ಸವಾಲುಃ</u>** ಆರೋಪಿತರ ಪರ ವಕೀಲರು ಗೈರು, ಆರೋಪಿತರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಯಾವುದೇ ಸಮಂಜಸ ಕಾರಣ ನೀಡದಿದ್ದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ</u>** 1ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು 2ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲಿನಂತೆ ಇರುತ್ತದೆ ಎಂದು ತಿಳಿಸಿ ಅವರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ತೆರೆದ ನ್ಯಾಯಾಲಯದಲ್ಲಿ ಎರಡೂ ಪಕ್ಷಗಳವರ ಸಮಕ್ಷಮ ಒಂದು ಸೀಲಾದ ಬಿಳಿ ಬಟ್ಟೆಯ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿರುವ ಒಂದು ರಕ್ತಕಲೆಯಾದ ಹಸಿರು ಬಿಳಿ ಬಣ್ಣದ ಶರ್ಟನ್ನು ನೋಡಿ ಗುರುತಿಸಿದ್ದು, ಸದರಿ ರಕ್ತಕಲೆಯಾದ ಹಸಿರು ಬಿಳಿ ಬಣ್ಣದ ಶರ್ಟನ್ನು ಎಂಓ-28 ಎಂದು ಗುರುತಿಸಲಾಯಿತು.